# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST

ಇದು ಸುದ್ದಿ ವಿಲಾಸ

ಕನ್ನಡ ದಿನಪತ್ರಿಕೆ

ಹಾಸನ

E-mail : kannadapostnews@gmail.com / ಕನ್ನಡ post

Price: ₹1

Vol.No.02 | Issue. 15 | Pages. 2 | Date: 10-12-2025, WEDNESDAY RNI NO: KARKAN/2024/89601 Kannada Daily

ಸಂಪುಟ : 02 – ಸಂಚಿಕೆ : 15 – ಪುಟಗಳು : 2 10-12-2025 ಬುಧವಾರ Ph: 8762954248 ದರ : ₹1


# ಕೇಂದ್ರ ಕೃಷಿ ಸಚಿವರೆದುರು ಕೃಷಿಕರ ಸಂಕಷ್ಟ ಬಿಚ್ಚಿಟ್ಟ ಸಂಸದ ಶ್ರೇಯಸ್

## ಮೆಕ್ಕೆಜೋಳಕ್ಕೆ ಹೆಚ್ಚುವರಿ ಬೆಲೆ ಘೋಷಿಸಿ | ಡಿಸ್ಟಲರಿಗಳಿಗೆ ಮಾರ್ಗದರ್ಶನ ನೀಡಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಸಂಸತ್ ಅಧಿವೇಶನ ಹಿನ್ನೆಲೆಯಲ್ಲಿ ದೆಹಲಿ ಪ್ರವಾಸದಲ್ಲಿರುವ ಸಂಸದ ಶ್ರೇಯಸ್ ಪಟೇಲ್ ಅವರು ಕೃಷಿ ಸಚಿವ ಶಿವರಾಜ್ ಸಿಂಗ್ ಚವ್ಹಾಣ್ ಅವರನ್ನು ಭೇಟಿಯಾಗಿ ಕೃಷಿ ಸಮಸ್ಯೆಗಳ ಕುರಿತು ಸುದೀರ್ಘ ಚರ್ಚಿಸಿ ಪರಿಹಾರ ಕ್ರಮ ಜರುಗಿಸಬೇಕೆಂದು ಮನವಿ ಮಾಡಿದರು.

ರಾಜ್ಯದ ಜ್ವಲಂತ ಸಮಸ್ಯೆಗಳಾದ ಕಬ್ಬು ಹಾಗೂ ಮೆಕ್ಕೆಜೋಳ ಬೆಳೆಗಾರರ ಬೇಡಿಕೆಗಳ ಕುರಿತು ಮಾಹಿತಿ ನೀಡಿ ರಾಜ್ಯದ ರೈತರ ಹಿತ ಕಾಪಾಡುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಕೈಗೊಂಡಿರುವ ತ್ವರಿತ ಕ್ರಮಗಳ ಕುರಿತು ಮನವರಿಕೆ ಮಾಡಿಕೊಟ್ಟರು.

2025-26ರ ಸಕ್ಕರೆ ಕಬ್ಬಿನ ನ್ಯಾಯ ಸಮ್ಮತ ಮತ್ತು ಪರಿಹಾರ ದರ ಪ್ರತಿ ಟನ್ ಗೆ 3,550 ರೂ. ಎಂದು ನಿಗದಿಯಾಗಿದ್ದರೂ 800 ರಿಂದ 900 ರೂ. ವರೆಗಿನ ವೆಚ್ಚಗಳಿಂದ ರೈತರಿಗೆ ದೊರೆಯುವ ನಿಜವಾದ ಆದಾಯ 2,600 3,000 ರೂ. ಮಾತ್ರ ಆಗಿದೆ. ಈ ನಷ್ಟ ತಪ್ಪಿಸಲು ರಾಜ್ಯ ಸರ್ಕಾರ ಹಲವು ಕ್ರಮ ಕೈಗೊಂಡಿದ್ದು, ಪ್ರತಿ ಟನ್‌ಗೆ 100 ರೂ. ಹೆಚ್ಚುವರಿ ಸಹಾಯವನ್ನು ರಾಜ್ಯ ಸರ್ಕಾರ ಮತ್ತು ಸಕ್ಕರೆ ಕಾರ್ಖಾನೆಗಳು ಸಮಾನವಾಗಿ ಹಂಚಿಕೊಂಡು ನೀಡುತ್ತಿವೆ. 272 ಕೋಟಿ ಲೀಟರ್ ಇರುವ ಕರ್ನಾಟಕದ ಎಥೆನಾಲ್ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚುವರಿಯಾಗಿ ಇನ್ನು 133 ಕೋಟಿ ಲೀಟರ್ ಗೆ ಹೆಚ್ಚಿಸಬೇಕು. ಎಥೆನಾಲ್ ದರವನ್ನು ಪ್ರತಿ ಲೀಟರ್ 45 ರೂ.ಗೆ ಹೆಚ್ಚಿಸಬೇಕು ಎಂದು ಮನವಿ ಮಾಡಿದರು.

ಅದೇ ರೀತಿ ಪ್ರಮುಖವಾಗಿ ಮೆಕ್ಕೆ ಜೋಳ ಬೆಳೆಗೆ ಬೆಂಬಲ ಬೆಲೆ ಹೆಚ್ಚಿಸುವಂತೆ ಕೋರಿದರು. ಪ್ರತಿ ಕ್ವಿಂಟಾಲ್ 2,639 ರೂ. ದರದಲ್ಲಿ ಖರೀದಿ ಮಾಡಲು ನೀಡಿರುವ ಆದೇಶ ಇನ್ನೂ ಜಾರಿಯಾಗಿಲ್ಲ. ಡಿಸ್ಟಿಲರಿಗಳು ಖರೀದಿ ಆದೇಶವಿಲ್ಲದೆ ಪ್ರಕ್ರಿಯೆ ಆರಂಭಿಸದೆ ತೊಂದರೆ ಆಗುತ್ತಿದ್ದು ಸಚಿವಾಲಯ ಈ ನಿಟ್ಟಿನಲ್ಲಿ ಆದೇಶ ಹೊರಡಿಸಬೇಕೆಂದು ವಿನಂತಿ ಮಾಡಿದರು.



### ಸರ್ಕಾರದ ಆದೇಶಕ್ಕೆ ಬೆಲೆ ಇಲ್ಲ

ಮೆಕ್ಕೆ ಜೋಳ ಬೆಳೆಗಾರರಿಗೆ ನೆರವಾಗಲೆಂದು ಬೆಂಬಲ ಬೆಲೆಯಡಿ ಪ್ರತಿ ರೈತರಿಂದ 50 ಕ್ವಿಂಟಾಲ್ ಜೋಳ ಖರೀದಿಗೆ ಸರ್ಕಾರ ಆದೇಶ ಹೊರಡಿಸಿದೆಯಾದರೂ ಕರ್ನಾಟಕ ಹಾಲು ಮಹಾಮಂಡಳ ಖರೀದಿ ಮಾಡದೆ ಸರ್ಕಾರಿ ಆದೇಶಕ್ಕೂ ತಮಗೂ ಸಂಬಂಧವಿಲ್ಲ ಎಂಬಂತೆ ವರ್ತಿಸುತ್ತಿದೆ.

ಪ್ರತಿ ಕ್ವಿಂಟಾಲ್‌ಗೆ 2,400 ರೂ.ನಂತೆ 50 ಕ್ವಿಂಟಾಲ್ ಮಾರಾಟ ಮಾಡಬಹುದೆಂದು ರೈತರು ಖುಷಿಯಲ್ಲಿದ್ದರು. ಎರಡು ದಿನಗಳಿಂದ ನಗರದ ಹೊಳೆನರಸೀಪುರ ರಸ್ತೆಯಲ್ಲಿರುವ ಪಶು ಆಹಾರ ಘಟಕದಲ್ಲಿ ನೋಂದಣಿ ಪ್ರಕ್ರಿಯೆ ನಡೆಯುತ್ತಿಲ್ಲ. 10 ಸಾವಿರ ಮೆಟ್ರಿಕ್ ಟನ್ ನೋಂದಣಿಗೆ ಮೇಲಧಿಕಾರಿಗಳಿಂದ ಆದೇಶವಿತ್ತು. 4,137 ರೈತರು ಇದುವರೆಗೆ ನೋಂದಣಿ ಮಾಡಿಕೊಂಡಿದ್ದು ಪ್ರಕ್ರಿಯೆ ಮುಕ್ತಾಯವಾಗಿದೆ. ಹೊಸದಾಗಿ ಖರೀದಿಗೆ ಸೂಚನೆ ಬಂದಿಲ್ಲವೆಂದು ಸ್ಥಳೀಯ ಅಧಿಕಾರಿಗಳು ಉತ್ತರಿಸುತ್ತಿದ್ದಾರೆ. ಸರ್ಕಾರದ ಆದೇಶವಿದ್ದರೂ ಖರೀದಿಸದೆ ಇರುವ ಅಧಿಕಾರಿಗಳ ವಿರುದ್ಧ ಅನ್ನದಾತರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

### ಸಾಮರ್ಥ್ಯಕ್ಕೆ ತಕ್ಕ ಮೆಕ್ಕೆಜೋಳ ದಾಸ್ತಾನು

ಹಾಸನ ಪಶು ಆಹಾರ ಘಟಕದಲ್ಲಿ ನಿತ್ಯ 500 ಟನ್‌ನಂತೆ ಪಶು ಆಹಾರ ಸೇರಿ ಇತರ ಉಪ ಉತ್ಪನ್ನಗಳ ತಯಾರಿಸಲು ವಾರ್ಷಿಕ 36 ಸಾವಿರ ಮೆಟ್ರಿಕ್ ಟನ್ ಮೆಕ್ಕೆ ಜೋಳದ ಅವಶ್ಯಕತೆಯಿದೆ. ಘಟಕದಲ್ಲಿ ಈಗಾಗಲೇ 30 ಸಾವಿರ ಮೆ. ಟನ್ ಜೋಳ ದಾಸ್ತಾನಿದೆ. ಅದರ ಹೊರತಾಗಿ ಬೆಂಬಲ ಬೆಲೆಯಡಿ ಇನ್ನೂ 30 ಸಾವಿರ ಮೆ. ಟನ್ ಖರೀದಿಸುವಂತೆ ಒತ್ತಡ ಹೇರುತ್ತಿದ್ದು ಅಷ್ಟು ಪ್ರಮಾಣದ ಜೋಳ ಪಡೆದು ಏನು ಮಾಡುವುದು. ಆದಾಗ್ಯೂ ಹೆಚ್ಚುವರಿಯಾಗಿ ಜೋಳ ಖರೀದಿಸಲು ಮೇಲಧಿಕಾರಿಗಳ ನಿರ್ದೇಶನವಿಲ್ಲವೆಂದು ಪಶು ಆಹಾರ ಘಟಕ ವ್ಯವಸ್ಥಾಪಕ ನಿರ್ದೇಶಕ ಲಕ್ಷ್ಮಿ ರಂಗನಾಥ್ ಪ್ರತಿಕ್ರಿಯಿಸಿದರು.



# ಡಿ.13 ರಂದು ಉಲ್ಕೆಗಳ ಸುರಿಮಳೆ ವೀಕ್ಷಣೆ




ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್


ಹಾಸನ: ಆಕಾಶದಲ್ಲಿ ಅದ್ಭುತ ಉಲ್ಕೆಗಳ ಸುರಿಮಳೆ ವೀಕ್ಷಣಾ ಕಾರ್ಯಕ್ರಮವನ್ನು ಡಿ.13 ರಂದು ತಾಲೂಕಿನ ತಿರುಪತಿಹಳ್ಳಿಯ ಬೆಟ್ಟದಲ್ಲಿ ನಡೆಯಲಿದೆ ಎಂದು ಭಾರತ ಜ್ಞಾನ ವಿಜ್ಞಾನ ಸಮಿತಿ ಜಿಲ್ಲಾ ಕಾರ್ಯದರ್ಶಿ ಚಿನ್ನೇನಹಳ್ಳಿ ಸ್ವಾಮಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿ, ಡಿಸೆಂಬರ್‌ನಲ್ಲಿ ಕಾಣಿಸಿಕೊಳ್ಳುವ ಅಪರೂಪದ ಬೀಳುವ ಕಲ್ಲು ಎಂದೇ ಜನಜನಿತವಾದ ಉಲ್ಕಾ ಮಳೆಗಳ ಅಭೂತಪೂರ್ವ ಸೌರ ಚಟುವಟಿಕೆ ನಮ್ಮೂರ ಸಭಾಂಗಣದಲ್ಲಿ ಜರುಗಲಿದೆ ಎಂದರು.

ಪ್ರತಿ ಗಂಟೆಗೆ ಸುಮಾರು 20-25ಕ್ಕೂ ಹೆಚ್ಚು ಉಲ್ಕೆಗಳು ಬೀಳುವ ಅವಕಾಶ ಇದೆ. ಈ ವಿಸ್ಮಯಕಾರಿ ಆಕಾಶ ಘಟನೆಯನ್ನು ನೋಡುವ ಸಲುವಾಗಿ ಡಿ.13-14 ರ ಮಧ್ಯರಾತ್ರಿವರೆಗೆ ಖಗೋಳ ವಿಜ್ಞಾನ ಆಸಕ್ತರಿಗೆ, ಸಾರ್ವಜನಿಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ಸ್ಥಳೀಯರ ಸಹಭಾಗಿತ್ವದಲ್ಲಿ ವಿಶೇಷ ಅರಿವು ಮತ್ತು ವೀಕ್ಷಣಾ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದರು.

ಸಂಪನ್ಮೂಲ ವ್ಯಕ್ತಿಗಳಾಗಿ ಕೆ.ಎಸ್.ರವಿಕುಮಾರ್-ಆಕಾಶ ಮತ್ತು ಆರೋಗ್ಯ ಕುರಿತು, ಕೆ.ವಿ.ಕವಿತ ಸೌರವ್ಯೂಹದ ಅದ್ಭುತ ಸೃಷ್ಟಿ ಹಾಗೂ ಉಲ್ಕಾಪಾತಗಳ ಸವಿವರವನ್ನು ಪಿಟಿಪಿ ಮೂಲಕ ವಿವರಿಸಲಿದ್ದಾರೆ. ಅಹಮದ್ ಹಗರೆ ಅವರು ರಾಶಿ-ಜನ್ಮ ನಕ್ಷತ್ರಗಳ ಪತ್ತೆ ಹಚ್ಚುವಿಕೆ ನಡೆಸಿಕೊಡಲಿದ್ದಾರೆ. ನಿಟ್ಟೂರು ಗ್ರಾಪಂ ಅಧ್ಯಕ್ಷ ನಟರಾಜ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಮೊದಲು ನೋಂದಾಯಿಸಿದ 100 ಜನರಿಗೆ ಮಾತ್ರ ಅವಕಾಶ ಕಲ್ಪಿಸಲಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಕೆ.ವಿ.ಕವಿತಾ, ಮೋನಿಕಾ, ಅಹಮದ್ ಹಗರೆ ಇದ್ದರು.

# ದಿಡಗ ಏತ ನೀರಾವರಿಗೆ ಯೋಜನೆಗೆ 74 ಕೋಟಿ ರೂ.



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಚನ್ನರಾಯಪಟ್ಟಣ: ದಿಡಗ ಭಾಗದ ರೈತರ ಹತ್ತಾರು ವರ್ಷಗಳ ಕನಸಾಗಿದ್ದ ಏತ ನೀರಾವರಿ ಯೋಜನೆಗೆ ರಾಜ್ಯ ಕಾಂಗ್ರೆಸ್ ಸರ್ಕಾರ 74 ಕೋಟಿ ರೂ. ಬಿಡುಗಡೆ ಮಾಡಿದೆ ಎಂದು ವಿಧಾನ ಪರಿಷತ್ ಮಾಜಿ ಶಾಸಕ ಎಂ.ಎ. ಗೋಪಾಲಸ್ವಾಮಿ ಹೇಳಿದರು.

ತಾಲೂಕಿನ ಕೆ.ವಡ್ಡರಹಳ್ಳಿ ಗ್ರಾಮದಲ್ಲಿ ಸಮುದಾಯ ಭವನ ಉದ್ಘಾಟನೆ ಸಮಾರಂಭದಲ್ಲಿ ಮಾತನಾಡಿ, ದಿಡಗ, ದಿಡಗ ತುಮಕೂರು ಗ್ರಾಮದ ರೈತರು ಕೆರೆ ತುಂಬಿಸುವಂತೆ ಹಲವು ವರ್ಷಗಳಿಂದ ಮನವಿ ಮಾಡಿಕೊಂಡಿದ್ದರು. ಈ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮತ್ತು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ನಾನು ಮನವಿ ಮಾಡಿದ್ದೆ. ಸರ್ಕಾರ ಸ್ಪಂದಿಸಿ ಅನುದಾನ ಬಿಡುಗಡೆ ಮಾಡಿ ಹಾಸನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಯೋಜನೆಗೆ ಶಂಕುಸ್ಥಾಪನೆ ನೆರವೇರಿಸಲಾಗಿದೆ ಎಂದರು.

### ಹತ್ತಾರು ವರ್ಷಗಳ ಕನಸು-ನನಸು

ಅನೇಕ ವರ್ಷಗಳಿಂದ ಈ ಭಾಗದಲ್ಲಿ ಕೆರೆಗಳು ತುಂಬದೇ ರೈತರು ಸಮಸ್ಯೆ ಎದುರಿಸುತ್ತಿದ್ದರು. ಈ ಭಾಗದ ಜನ ಜಾನುವಾರುಗಳಿಗೆ ಹಕ್ಕಿ ಪಕ್ಷಿಗಳಿಗೂ ಕೂಡ ಕುಡಿಯುವ ನೀರಿಗೂ ಸಮಸ್ಯೆಯಾಗಿತ್ತು. ನಾಗಮಂಗಲ ಭಾಗದ ಹೇಮಾವತಿ ನಾಲೆಯಿಂದ ಏತ ನೀರಾವರಿ ಯೋಜನೆ ಮೂಲಕ ಈ ಭಾಗದ ಕೆರೆಗಳನ್ನು ತುಂಬಿಸಲು ಯೋಜನೆ ರೂಪಿಸಲಾಗಿದೆ ಎಂದು ತಿಳಿಸಿದರು.

ನೂತನವಾಗಿ ನಿರ್ಮಾಣಗೊಂಡಿರುವ ಸಮುದಾಯ ಭವನಕ್ಕೆ ನಾನು ಸುಮಾರು 7 ಲಕ್ಷ ಹಣ ನೀಡಿದ್ದೇನೆ. ನನ್ನ ಅವಧಿಯಲ್ಲಿ ಜಿಲ್ಲೆಯ ಹಾಗೂ ತಾಲೂಕಿನ ನೀರಾವರಿ ಸೇರಿದಂತೆ ಅನೇಕ ಅಭಿವೃದ್ಧಿ ಕೆಲಸಗಳಿಗೆ ಹೆಚ್ಚು ಶ್ರಮವಹಿಸಿರುವುದಾಗಿ ತಿಳಿಸಿದರು.

ಮುಖಂಡರಾದ ವಡ್ಡರಹಳ್ಳಿ ಮೋಹನ್, ನಟೇಶ್, ಪ್ರಮೋದ, ವಿ.ಹೆಚ್.ರಮೇಶ್, ವಿ.ಎನ್. ಬೋರೇಗೌಡ, ವಿ.ಹೆಚ್. ಹನುಮಂತೇಗೌಡ ಹಾಗೂ ಇತರರಿದ್ದರು.

# ಮಹನೀಯರ ಪ್ರತಿಮೆ ಅಳವಡಿಕೆ ವಿಚಾರ: ಜಾಗ ಸರ್ವೆಗೆ ನಿರ್ಧಾರ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹೊಳೆನರಸೀಪುರ: ತಾಲ್ಲೂಕಿನ ಬಂಡಿಶೆಟ್ಟಿಹಳ್ಳಿ ಗ್ರಾಮದಲ್ಲಿ ನಾಡಪ್ರಭು ಕೆಂಪೇಗೌಡರ ಪ್ರತಿಮೆ ಹಾಗೂ ಸಂವಿಧಾನ ಶಿಲ್ಪಿ ಡಾ. ಬಿ.ಆರ್.ಅಂಬೇಡ್ಕರ್ ನಾಮಫಲಕ ಅಳವಡಿಕೆ ವಿಚಾರಕ್ಕೆ ಸಂಬಂಧಿಸಿ ಜಾಗ ಸರ್ವೆ ಮಾಡಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ತಹಶೀಲ್ದಾರ್ ವೈ.ಎಂ.ರೇಣುಕುಮಾರ್ ಹೇಳಿದರು.

ಕಳೆದ ನಾಲ್ಕು ದಿನಗಳಿಂದ ಗ್ರಾಮದಲ್ಲಿ ಪರಿಸ್ಥಿತಿ ಬಿಗಡಾಯಿಸಿದ್ದರಿಂದ ಮಂಗಳವಾರ ಶಾಂತಿ ಸಭೆಯಲ್ಲಿ ಮಾತನಾಡಿ, ಜಾಗದ ವಿಚಾರವಾಗಿ ಹುಟ್ಟಿಕೊಂಡಿರುವ ವಿವಾದವನ್ನು ಕಾನೂನು ಪ್ರಕಾರ ಬಗೆಹರಿಸಬೇಕಿದ್ದು ವಾರದ ಬಳಿಕ ಮತ್ತೊಮ್ಮೆ ಸಭೆ ನಡೆಸಲಾಗುವುದು ಎಂದು ತಿಳಿಸಿದರು.

2012ರ ಸರ್ಕಾರದ ಸುತ್ತೋಲೆ ಪ್ರಕಾರ ಸರ್ಕಾರಿ ಜಾಗದಲ್ಲಿ ಮಹನೀಯರ ಪುತ್ಥಳಿ, ನಾಮಫಲಕ ಅಳವಡಿಸುವಂತಿಲ್ಲ. ಸ್ವಂತ ಜಾಗದಲ್ಲೇ ಸ್ಥಾಪಿಸುವಂತಿದ್ದರೆ ಜಾಗದ ಮಾಲೀಕರಿಂದ ಮುಚ್ಚಳಿಕೆ ಬರೆದು ಸರ್ಕಾರದ ಅನುಮತಿ ಪಡೆಯಬೇಕು.

ಎರಡೂ ಕಡೆಯವರು ಈ ನಿಯಮ ಪಾಲಿಸಿಲ್ಲ. ಮೊದಲು ಜಾಗದ ಸರ್ವೆ ಮಾಡಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದರು.



### ಗ್ರಾಮದಲ್ಲಿ ಆಗಿದ್ದೇನು

ಕೆರಗೋಡು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬಂಡಿಶೆಟ್ಟಿಹಳ್ಳಿಯಲ್ಲಿ ಒಕ್ಕಲಿಗ ಸಮುದಾಯದವರು ಜುಲೈನಲ್ಲಿ ಕೆಂಪೇಗೌಡರ ಪ್ರತಿಮೆ ಪ್ರತಿಷ್ಠಾಪಿಸಿದ್ದಾರೆ. ಇತ್ತೀಚೆಗೆ ಎಸ್ಸಿ, ಎಸ್ಟಿ ಸಮಾಜದವರು ಅಂಬೇಡ್ಕರ್ ಭಾವಚಿತ್ರವಿರುವ ನಾಮಫಲಕವನ್ನು ಕೆಂಪೇಗೌಡ ಪ್ರತಿಮೆ ಪಕ್ಕದಲ್ಲೇ ಅಳವಡಿಸಿದ್ದು ವಿವಾದದ ಕೇಂದ್ರಬಿಂದುವಾಗಿದೆ. ಕೆಂಪೇಗೌಡ ಜಯಂತಿ ಅಥವಾ ಮತ್ತಿತರ ಕಾರ್ಯಕ್ರಮದ ವೇಳೆ ಅಂಬೇಡ್ಕರ್ ನಾಮಫಲಕಕ್ಕೆ ಹಾನಿಯಾದರೆ, ಸಂಭ್ರಮಾಚರಣೆ ವೇಳೆ ಅಚಾತುರ್ಯದಿಂದ ಪಟಾಕಿ ಸಿಡಿದರೆ, ಸ್ವಚ್ಛತಾ ಸಂದರ್ಭದಲ್ಲಿ ಕಸಕಡ್ಡಿ ಬಿದ್ದರೆ ಕ್ಷುಲ್ಲಕ ಕಾರಣಕ್ಕೆ ಗಲಾಟೆಯಾಗುವ ಸಂಭವವಿರುತ್ತದೆ.

ಇಬ್ಬರೂ ಸಮಾಜ ಸುಧಾರಕರೇ ಆಗಿದ್ದಾರೆ. ಮಹನೀಯರಿಗೆ ನಾವು ಗೌರವ ನೀಡಬೇಕೆಂದರೆ ಬೇರೆ ಬೇರೆ ಜಾಗದಲ್ಲಿ ಪ್ರತಿಷ್ಠಾಪಿಸಬೇಕೆಂದು ಒಕ್ಕಲಿಗ ಸಮುದಾಯ ಮುಖಂಡರು ಪ್ರತಿಪಾದಿಸಿದರು.

ಅದಕ್ಕೆ ಎಸ್‌ಸಿ, ಎಸ್‌ಟಿ ಸಮುದಾಯದವರು ಆಕ್ಷೇಪ ವ್ಯಕ್ತಪಡಿಸಿದ್ದು, ಕೆಂಪೇಗೌಡ, ಅಂಬೇಡ್ಕರ್ ಇಬ್ಬರಿಗೂ ಸಮಾನ ಗೌರವ ಸಿಗಬೇಕು. ಬೇರೆ ಕಡೆ ಅಂಬೇಡ್ಕರ್ ನಾಮಫಲಕ ಹಾಕಿರಿ ಎನ್ನುವುದು ಸರಿಯಲ್ಲ ಎಂದು ತಮ್ಮ ವಾದ ಮಂಡಿಸಿದರು.

ಎರಡೂ ಕಡೆಯವರ ಭಿನ್ನ ಹೇಳಿಕೆಯಿಂದ ಸಮಸ್ಯೆಗೆ ಪರಿಹಾರ ಸಿಗದಂತಾಯಿತು. ಪ್ರತಿಮೆ ಹಾಗೂ ನಾಮಫಲಕ ಅಳವಡಿಸಿರುವ ಜಾಗ ಜಾರಿಗೆ ಸೇರಿದ್ದೆಂಬ ಪ್ರಶ್ನೆ ಉದ್ಭವವಾಗಿದೆ. ಪ್ರದೇಶ ಗ್ರಾಮ ಠಾಣಾಗೆ ಸೇರಿದೆಯಾದರೂ ಎರಡೂ ಕಡೆಯವರು ತಮ್ಮ ಸಮುದಾಯದ ಜಾಗವೆಂದು ಹೇಳುತ್ತಿದ್ದಾರೆ. ಆದರೆ ಯಾವುದೇ ದಾಖಲೆ ಪರಿಶೀಲನೆ ಮತ್ತು ಸರ್ವೆ ನಡೆಸದರೆ ತೀರ್ಮಾನ ಕೈಗೊಳ್ಳಲು ಸಾಧ್ಯವಿಲ್ಲವೆಂದು ಅಧಿಕಾರಿಗಳು ಸಭೆಯನ್ನು ಮುಂದೂಡಿದರು. ಮುಂಜಾಗ್ರತಾ ಕ್ರಮವಾಗಿ ಗ್ರಾಮದಲ್ಲಿ ಪೊಲೀಸ್ ಬಿಗಿ ಭದ್ರತೆ ವಹಿಸಲಾಗಿದೆ.

ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಮುನಿರಾಜ್, ರಾಜಸ್ವ ನಿರೀಕ್ಷಕ ಶಿವರಾಜ್, ಪಿಎಸ್‌ಐ ಅಭಿಜಿತ್, ಎಸ್.ರಮೇಶ್‌ಕುಮಾರ್ ಇತರರಿದ್ದರು.

# ಬೂಕನಬೆಟ್ಟ ಜಾತ್ರೆ: ಎತ್ತಿನ ಗಾಡಿಗಳಿಗೆ ಸುಂಕ ವಿಧಿಸುವಂತಿಲ್ಲ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಚನ್ನರಾಯಪಟ್ಟಣ: ಬೂಕನ ಬೆಟ್ಟದಲ್ಲಿ ಜ.10 ರಿಂದ ಜ.21ರ ವರೆಗೆ ನಡೆಯುವ ಶ್ರೀರಂಗನಾಥ ಸ್ವಾಮಿ ಜಾತ್ರೆಗೆ ಬರುವ ಜಾನುವಾರಗಳಿಗೆ ಮತ್ತು ಎತ್ತಿನ ಗಾಡಿಗೆ ಸುಂಕ ವಸೂಲಾತಿ ಇರುವುದಿಲ್ಲ ಎಂದು ಶಾಸಕ ಸಿ.ಎನ್ ಬಾಲಕೃಷ್ಣ ಹೇಳಿದರು.

ತಾಲೂಕಿನ ಪುರಾಣ ಪ್ರಸಿದ್ಧ ಬೂಕನಬೆಟ್ಟದಲ್ಲಿ ಏರ್ಪಡಿಸಿದ್ದ ಜಾತ್ರಾ ಮಹೋತ್ಸವ ಪೂರ್ವಭಾವಿ ಸಭೆಯಲ್ಲಿ ಮಾತನಾಡಿ, ಉತ್ತಮ ಎತ್ತುಗಳಿಗೆ 2 ಗ್ರಾಂ ಚಿನ್ನವನ್ನು ಬಹುಮಾನವಾಗಿ ಕೊಡಲಾಗುವುದು ಎಂದರು.

ಸಭೆಯ ಪ್ರಾರಂಭದಲ್ಲಿ ರಾಸುಗಳ ಸುಂಕವನ್ನು ಕೈ ಬಿಡುವಂತೆ ರೈತ



ಮುಖಂಡರು ಕೇಳಿದ್ದಾರೆ. ಇತರೆ ಸುಂಕಗಳ ಬಹಿರಂಗ ಹರಾಜು ಪ್ರಕ್ರಿಯೆಯನ್ನು ತಹಶೀಲ್ದಾರ್ ದಿನಾಂಕವನ್ನು ನಿಗದಿಪಡಿಸಿ ನಡೆಸುತ್ತಾರೆ ಎಂದು ತಿಳಿಸಿದರು.

ಮತಿಘಟ್ಟ ಪಂಚಾಯಿತಿ ವತಿಯಿಂದ ವಿದ್ಯುತ್ ದೀಪಗಳ ವ್ಯವಸ್ಥೆಯನ್ನು, ಬೆಳಗೀಹಳ್ಳಿ ಪಂಚಾಯಿತಿ ವತಿಯಿಂದ ಕುಡಿಯುವ ನೀರು ಸರಬರಾಜಿಗೆ ಸಂಬಂಧಿಸಿದ ಸೌಲಭ್ಯಗಳನ್ನು ಮಾಡುಬೇಕು ಎಂದರು.

ಗ್ರಾಮೀಣ ಕ್ರೀಡೆಗಳನ್ನು ಹಿರೀಸಾವೆ ಗ್ರಾಮ ಪಂಚಾಯಿತಿಯವರ ನೇತೃತ್ವದಲ್ಲಿ ಮತ್ತು ಕೃಷಿ ಮತ್ತು ತೋಟಗಾರಿಕೆ ಇಲಾಖೆಯವರು ಕೃಷಿ ಮೇಳವನ್ನು ಆಯೋಜಿಸಬೇಕು. ಪಶು ಸಂಗೋಪನಾ ಮತ್ತು ಆರೋಗ್ಯ ಇಲಾಖೆಯವರು ಜಾತ್ರೆಯಲ್ಲಿ ಕರ್ತವ್ಯ ನಿರ್ವಹಿಸಬೇಕು. ಸೆಸ್ಕ್ ವತಿಯಿಂದ ತಾತ್ಕಾಲಿಕವಾಗಿ 63 ಕೆವಿ ವಿದ್ಯುತ್ ಪರಿವರ್ತಕವನ್ನು (ಟಿಸಿ) ಅಳವಡಿಸುವಂತೆ ಶಾಸಕರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ರೈತರ ಪರವಾಗಿ ಎಚ್. ಎಸ್. ರವಿಕುಮಾರ್, ಹೆಗ್ಗಡಿಹಳ್ಳಿ ಕೃಷ್ಣಮೂರ್ತಿ, ಮತಿಘಟ್ಟ ನಾಗೇಶ್, ರಂಗಸ್ವಾಮಿ, ಜನಿವಾರ ಸಂತೋಷ್, ಬೊಮ್ಮೇನಹಳ್ಳಿ ಗಿರೀಶ್, ಸುಂಡಹಳ್ಳಿ ರವಿ, ಕೃಷಿ ಸಂದೀಪ್, ಬೂಕದ ರಾಶಿಗೌಡ ಮತ್ತಿತರರು ಮಾತನಾಡಿದರು.

ಸಭೆಯಲ್ಲಿ ತಹಶೀಲ್ದಾರ್ ಜಿ.ಎಸ್. ಶಂಕರಪ್ಪ, ಉಪ ತಹಶೀಲ್ದಾರ್ ರವಿ, ಪಿಎಲ್‌ಡಿಬಿ ಅಧ್ಯಕ್ಷ ಬಿ.ಎಂ. ಮುಂಜುನಾಥ್. ಕೆಡಿಪಿ ನಾಮನಿರ್ದೇಶಿತ ಸದಸ್ಯ ಯೋಗೇಶ್ ಇತರರಿದ್ದರು.

# ಆನ್‌ಲೈನ್ ಗೇಮ್-ಸೈಬರ್ ಕ್ರೈಂ ವಿರುದ್ಧ ಕ್ರಮಕ್ಕೆ ಆಗ್ರಹ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಸಕಲೇಶಪುರ: ರಾಜ್ಯದಲ್ಲಿ ಆನ್‌ಲೈನ್ ಬೆಟ್ಟಿಂಗ್, ಗೇಮ್‌ಗಳನ್ನು ನಿಷೇಧಿಸಲು ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಶಾಸಕ ಸಿಮೆಂಟ್ ಮಂಜು ಆಗ್ರಹಿಸಿದರು.

ಬೆಳಗಾವಿಯಲ್ಲಿ ನಡೆಯುತ್ತಿರುವ ಚಳಿಗಾಲದ ಅಧಿವೇಶನದಲ್ಲಿ ಮಾತನಾಡಿ, ಆನ್‌ಲೈನ್ ಬೆಟ್ಟಿಂಗ್ ಆ್ಯಪ್ ಹಾಗೂ ಗೇಮಿಂಗ್ ಆ್ಯಪ್‌ಗಳ ವ್ಯಸನಕ್ಕೆ ಹಾಸನ ಜಿಲ್ಲೆ ಮಾತ್ರವಲ್ಲದೆ ರಾಜ್ಯದ ಹಲವೆಡೆ ಯುವಕರು ಬಲಿಯಾಗಿದ್ದಾರೆ.

ಸೈಬರ್ ಕ್ರೈಂಗಳಿಗೆ ಒಳಗಾಗಿ ಸಾವಿರಾರು ಯುವಕರು ತಮ್ಮ ಜೀವನ ಹಾಳು ಮಾಡಿಕೊಂಡಿದ್ದಾರೆ. ದೇಶದಲ್ಲಿ ಸೈಬರ್ ಅಪರಾಧಗಳ ಕುರಿತು ಕರ್ನಾಟಕದಲ್ಲಿಯೇ ಅತಿ ಹೆಚ್ಚು ಪ್ರಕರಣಗಳು ದಾಖಲಾಗಿವೆ. ಈ ಕುರಿತು ಸರ್ಕಾರ ಗಮನ ಹರಿಸಿ ಸೂಕ್ತ ರೀತಿಯ ಕಾನೂನು ರೂಪಿಸಬೇಕು

ಕೇಂದ್ರ ಸರ್ಕಾರದ ಸೈಬರ್ ಕ್ರೈಂ ಸಹಾಯವಾಣಿ (1930) ರ ಮಾದರಿ ರಾಜ್ಯ ಸರ್ಕಾರದ ವತಿಯಿಂದಲೂ ಸಹಾಯವಾಣಿ ಸ್ಥಾಪಿಸುವ ಮೂಲಕ ಸೈಬರ್ ಅಪರಾಧಗಳನ್ನು ತಡೆಗಟ್ಟಲು ಕ್ರಮ ವಹಿಸಬೇಕೆಂದು ಗೃಹ ಸಚಿವರನ್ನು ಉದ್ದೇಶಿಸಿ ಸದನದಲ್ಲಿ ಮಾತನಾಡಿದರು.



# ಮೊಬೈಲ್ ಬಿಟ್ಟು ಪುಸ್ತಕ ಹಿಡಿಯಿರಿ

## ಸ್ಕಾಲರ್ಸ್ ವಿದ್ಯಾರ್ಥಿಗಳಿಗೆ ನಡೆದಾಡುವ ಕಂಪ್ಯೂಟರ್ ಖ್ಯಾತಿಯ ಬಸವರಾಜು ಸಲಹೆ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಅಸಾಮಾನ್ಯ ಸ್ಮರಣಶಕ್ತಿ ಮತ್ತು ವೇಗದ ಗಣಿತ ಲೆಕ್ಕಾಚಾರದ ಮೂಲಕ ನಡೆದಾಡುವ ಮಾನವ ಕಂಪ್ಯೂಟರ್ ಎಂದು ಪ್ರಸಿದ್ಧರಾಗಿರುವ ಬಸವರಾಜು ಉಮರಾಣಿ ಅವರು ನಗರದ ಸ್ಕಾಲರ್ಸ್ ವರ್ಲ್ಡ್ ಹಾಗು ಸ್ಕಾಲರ್ಸ್ ಇಂಟರ್ನ್ಯಾಷನಲ್ ಶಾಲೆಗೆ ಭೇಟಿ ನೀಡಿ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು.

ಮಕ್ಕಳು ನೀಡಿದ ಕಠಿಣ ಮತ್ತು ದೊಡ್ಡ ಸಂಖ್ಯೆಗಳ ಲೆಕ್ಕಗಳಿಗೆ ಅವರು ಕ್ಷಣಾರ್ಧದಲ್ಲಿ ಉತ್ತರಿಸುವ ರೀತಿ ಬೆರಗುಗೊಳಿಸಿತು. ಕಂಪ್ಯೂಟರ್ ಮಟ್ಟದ ವೇಗದಲ್ಲಿ ಉತ್ತರಿಸುವ ಅವರ ಸಾಮರ್ಥ್ಯಕ್ಕೆ ಮಕ್ಕಳು ಚಪ್ಪಾಳೆಯ ಸುರಿಮಳೆಗೈದರು. ದೇಹದ ನ್ಯೂನತೆಗಳಿದ್ದರೂ ಅದನ್ನು ಅಡ್ಡಿಯಾಗಿಸಿಕೊಳ್ಳದೆ ಸಾಧನೆ ಮಾಡಿದ ಬಸವರಾಜು ಉಮರಾಣಿ ಅವರನ್ನು ವಿದ್ಯಾರ್ಥಿಗಳು ಮತ್ತು ಸಿಬ್ಬಂದಿ ಕೊಂಡಾಡಿದರು. ಅಂತಾರಾಷ್ಟ್ರೀಯ ಮಟ್ಟದ ಗಣಿತ ಮತ್ತು ವ್ಯಕ್ತಿತ್ವ ವಿಕಸನ ತಜ್ಞರಾಗಿರುವ ಬಸವರಾಜು ಯೋಗ, ಧ್ಯಾನ, ಪ್ರಾಣಾಯಾಮ ಜೀವನದಲ್ಲಿ ಏಕಾಗ್ರತೆ, ಸ್ಮರಣ ಶಕ್ತಿ ಮತ್ತು ಆತ್ಮವಿಶ್ವಾಸವನ್ನು ಹೆಚ್ಚಿಸಲು ಹೇಗೆ ಸಹಾಯಕವಾಗುತ್ತದೆ ಎಂದು ತಿಳಿಸಿದರು.


ಮೊಬೈಲ್ ಬಿಟ್ಟು ಪುಸ್ತಕ ಹಿಡಿಯಿರಿ, ಜ್ಞಾನ ಭಂಡಾರ ವೃದ್ಧಿಯಾಗುತ್ತದೆ. ಗಣಿತವನ್ನು ಸುಲಭವಾಗಿ ಕಲಿಸಲು ಶಿಕ್ಷಕರು ಸರಳ ತಂತ್ರಗಳನ್ನು ಬಳಸಬೇಕೆಂದು ತಿಳಿಸಿದರು. ಶಾಲೆಯ ಆಡಳಿತಾಧಿಕಾರಿ ಡಾ. ಹೆಚ್. ಎನ್.ಚಂದ್ರಶೇಖರ್ ಅವರು, ಬಸವರಾಜು ಉಮರಾಣಿ ಅವರನ್ನು ಸನ್ಮಾನಿಸಿದರು. ಕಾರ್ಯದರ್ಶಿ ಮಮತಾ ಚಂದ್ರಶೇಖರ್ ಹಾಗೂ ಸಿಬ್ಬಂದಿ ಹಾಜರಿದ್ದರು.

# ದೇವಾಲಯ ಸಿಬ್ಬಂದಿಯಿಂದಲೇ ಪಾರ್ಕಿಂಗ್ ದಂಧೆ


## ಬೇಲೂರು ಚನ್ನಕೇಶವ ದೇಗುಲದಲ್ಲಿ ಅವ್ಯವಸ್ಥೆ । ನಿರ್ಲಕ್ಷ್ಯಕ್ಕೆ ಬೇಸತ್ತ ಪ್ರವಾಸಿಗರು

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಬೇಲೂರು: ವಿಶ್ವ ವಿಖ್ಯಾತ ಹೊಯ್ಸಳರ ಶಿಲ್ಪಕಲೆಯ ಚನ್ನಕೇಶವ ದೇವಾಲಯ ವೀಕ್ಷಣೆಗೆ ನಿತ್ಯ ಬರುವ ಸಾವಿರಾರು ಪ್ರವಾಸಿಗರು ಇಲ್ಲಿನ ಪಾರ್ಕಿಂಗ್ ಅವ್ಯವಸ್ಥೆಗೆ ರೋಸಿ ಹೋಗಿದ್ದಾರೆ. ಪಾರ್ಕಿಂಗ್ ಎಂಬ ಅವ್ಯವಸ್ಥೆ ಎಲ್ಲರ ನೆಮ್ಮದಿ ಹಾಳು ಮಾಡಿದೆ. ಮೂಲಸೌಲಭ್ಯವೇ ಜನರಿಗೆ ಕಂಟಕವಾಗಿ ಪರಿಣಮಿಸಿದೆ. ಸರಿಯಾದ ಪಾರ್ಕಿಂಗ್ ಸ್ಥಳ ವ್ಯವಸ್ಥೆ ಇದ್ದರೂ ದೇವಾಲಯದ ಆಡಳಿತ ಮಂಡಳಿ ಮತ್ತು ಸಿಬ್ಬಂದಿ ನಿರ್ಲಕ್ಷ್ಯದಿಂದ ಸಾರ್ವಜನಿಕರು ಪ್ರವಾಸಿಗರು ಸಂಬಂಧಪಟ್ಟವರಿಗೆ ಛೀಮಾರಿ ಹಾಕುತ್ತಿದ್ದಾರೆ. ದೇವಾಲಯ ಸಿಬ್ಬಂದಿಯೇ ಪಾರ್ಕಿಂಗ್ ಹೆಸರಿನಲ್ಲಿ ಹಣ ವಸೂಲಿ ಮಾಡುತ್ತಿರುವುದು ಬೆಳಕಿಗೆ ಬಂದಿದೆ.



ಜಗತ್ಪ್ರಸಿದ್ಧ ಶ್ರೀ ಚನ್ನಕೇಶ್ವರ ದೇವಾಲಯ ವೀಕ್ಷಣೆಗೆ ಬರುವ ಪ್ರವಾಸಿಗರು ಬೇಲೂರಿಗೆ ಬಂದ ತಕ್ಷಣ ಇದು ಪಾರ್ಕಿಂಗ್ ಶುಲ್ಕವೇ ಅಥವಾ ಬೇಲೂರಿಗೆ ಬಂದ ತಪ್ಪಿಗೆ ವಿಧಿಸುವ ದಂಡವೇ ಎಂದು ಗಾಬರಿಯಾಗುವ ಸನ್ನಿವೇಶ ಸೃಷ್ಟಿಯಾಗಿದೆ. ದೇವಾಲಯದ ಮುಂಭಾಗ ಬಂದ ತಕ್ಷಣವೇ ಸಿಬ್ಬಂದಿ ವಾಹನಗಳನ್ನು ರಸ್ತೆಯಲ್ಲಿ ಅಡ್ಡಗಟ್ಟಿ ಮನಬಂದಂತೆ ಪಾರ್ಕಿಂಗ್ ಸುಂಕವನ್ನು ವಿಧಿಸುತ್ತಿದ್ದು ಪ್ರವಾಸಿಗರ ಆಕ್ರೋಶಕ್ಕೆ ಕಾರಣವಾಗಿದೆ. ಇನ್ನು ಅಂತರ್ ರಾಜ್ಯ ಪ್ರವಾಸಿಗರ ವಾಹನಗಳಿಗೆ ನಿಗದಿತ ದರಕ್ಕಿಂತ ದುಪ್ಪಟ್ಟು ವಸೂಲಿ ಮಾಡುತ್ತಿದ್ದು, ಭಾಷೆ ಬಾರದ ಕಾರಣ ವಾಹನ ಸವಾರರಿಂದ ವಿಚಿತ್ರ ರೀತಿಯಲ್ಲಿ




ಹಣ ವಸೂಲಿ ಮಾಡಲಾಗುತ್ತಿದೆ ಎಂದು ಸಾರ್ವಜನಿಕ ವಲಯದಲ್ಲಿ ಗಂಭೀರ ಆರೋಪ ಕೇಳಿಬಂದಿವೆ.

**ದೇವಾಲಯ ಸಿಬ್ಬಂದಿ ನಿರ್ಲಕ್ಷ್ಯ**

ಪಾರ್ಕಿಂಗ್ ಗೊಂದಲಕ್ಕೆ ಸುಗಮ ಪರಿಹಾರ ನೀಡಬೇಕಾದ ದೇವಾಲಯದ ಆಡಳಿತ ಅಧಿಕಾರಿ ಹಾಗೂ ಸಿಬ್ಬಂದಿ ಕೇವಲ ಪ್ರವಾಸಿಗರಿಂದ ಹಣ ವಸೂಲಿ ಮಾಡುವುದರಲ್ಲಿ ತಲ್ಲೀನರಾಗಿದ್ದು ಶನಿವಾರ, ಭಾನುವಾರ ಸಾವಿರಾರು ವಾಹನಗಳು ದೇಗುಲಕ್ಕೆ ಆಗಮಿಸುತ್ತವೆ. ಪಾರ್ಕಿಂಗ್ ಲೆಕ್ಕ ಮಾತ್ರ ದೇಗುಲಕ್ಕೆ ಬೆಳ್ಳಣಿಕೆಯಷ್ಟು ನೀಡುತ್ತಿದ್ದು ಉಳಿದ ಹಣ ಎಲ್ಲಿ ಹೋಗುತ್ತಿದೆ ಎಂದು ಅನುಮಾನ ಕಾಡುತ್ತಿದೆ. ಜೊತೆಗೆ ಅಧಿಕಾರಿಗಳು ಕೈಕಟ್ಟಿಕೊಂಡಂತೆ ಮೌನವಾಗಿರುವುದು ಸಾರ್ವಜನಿಕರನ್ನು ಹೆಚ್ಚಾಗಿ ಕೋಪಗೊಳಿಸಿದೆ.

ಜಿಲ್ಲಾಧಿಕಾರಿಗಳಿಂದ ಪಾರ್ಕಿಂಗ್ ಕುರಿತು ಹಲವು ಕ್ರಮಗಳನ್ನು ಜಾರಿಗೊಳಿಸಿ ಸೂಚನೆ ಬಂದರೂ ಕ್ಯಾರೆ ಇಲ್ಲ ಎನ್ನುವಂತೆ ಅಧಿಕಾರಿಗಳ ಮತ್ತು ಸಿಬ್ಬಂದಿಗಳ ವರ್ತನೆ ತೋರುತ್ತಿದ್ದು ಮುಂದಿನ ದಿನಗಳಲ್ಲಿ ಇದು ಯಾವ ಹಾದಿ ಹಿಡಿಯುತ್ತದೆ ಎಂದು ಕಾದು ನೋಡಬೇಕಾಗಿದೆ.

ನಯನ ಮನೋಹರ ಶ್ರೀ ಚನ್ನಕೇಶವ ಸ್ವಾಮಿ ತಾಣಕ್ಕೆ ಶ್ರೀ ಚನ್ನಕೇಶವನನ್ನು ನೋಡಲು ಮತ್ತು ಇಲ್ಲಿಯ ಶಿಲ್ಪ ಕಲೆಗಳನ್ನು ಆನಂದಿಸಲು ದೇಶವಿದೇಶಗಳಿಂದ ಆಗಮಿಸುವವರ ಮೊದಲು ಕಂಡುಬರುವ ಅನುಭವವೇ ಪಾರ್ಕಿಂಗ್ ದಂಧೆ. ಪ್ರವಾಸೋದ್ಯಮವನ್ನು ಉತ್ತೇಜಿಸುವ ಬದಲು ಜನರನ್ನು ಕೆಣಕುವ ಕೆಲಸ ಇಲ್ಲಿ ನಡೆಯುತ್ತಿರುವುದರ ಮೇಲೆ ತಕ್ಷಣದ ಕ್ರಮ ಅನಿವಾರ್ಯವಾಗಿದೆ ಇನ್ನಾದರೂ ಸಂಬಂಧಪಟ್ಟ ಹಿರಿಯ ಅಧಿಕಾರಿಗಳು ದೇವಾಲಯದ ಆಡಳಿತ ಅಧಿಕಾರಿ ಮತ್ತು ಸಿಬ್ಬಂದಿ ಮೇಲೆ ಕ್ರಮ ಕೈಗೊಂಡು ಸಮಸ್ಯೆಗೆ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ ಎಂಬುದನ್ನು ಕಾದು ನೋಡಬೇಕಿದೆ.

# ಜು.18 ರಂದು ಶ್ರೀಕಂಠಯ್ಯ ಜನ್ಮ ಶತಮಾನೋತ್ಸವ




ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಚನ್ನರಾಯಪಟ್ಟಣ: ಮಾಜಿ ಕಂದಾಯ ಸಚಿವ ದಿ. ಹೆಚ್.ಸಿ. ಶ್ರೀಕಂಠಯ್ಯ ಅವರ ಜನ್ಮ ಶತಮಾನೋತ್ಸವವನ್ನು 2026 ಜು.18 ರಂದು ಆಚರಿಸಲಾಗುವುದು ಎಂದು ಎಪಿಎಂಸಿ ಮಾಜಿ ಅಧ್ಯಕ್ಷ ಉದಯಕುಮಾರ್ ಹೇಳಿದರು.

ಪಟ್ಟಣದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ರಾಜ್ಯ, ಜಿಲ್ಲೆ ಹಾಗೂ ತಾಲೂಕಿಗೆ ಅವರ ಕೊಡುಗೆ ಅಪಾರ ಎಂದರು.

ಚನ್ನರಾಯಪಟ್ಟಣ ಹಾಗೂ ಹಿರೀಸಾವೆ ಗ್ರಾಮದ ಸೂಕ್ತ ಸ್ಥಳದಲ್ಲಿ ಶ್ರೀಕಂಠಯ್ಯ ಅವರ ಕಂಚಿನ ಪ್ರತಿಮೆ ಸ್ಥಾಪಿಸಲಾಗುವುದು. ರಾಜ್ಯ ಮಟ್ಟದ ಮಹಿಳಾ ಸಬಲೀಕರಣ ಕಾರ್ಯಕ್ರಮ ನಡೆಸಲಾಗುವುದು ಎಂದು ತಿಳಿಸಿದರು.

ಮುಖಂಡರೆಲ್ಲಾ ಸೇರಿ ಪೂರ್ವಭಾವಿ ಸಭೆ ನಡೆಸಿ ದಿನಾಂಕ ನಿಗದಿಪಡಿಸಲಿದ್ದು ಹಂತ ಹಂತವಾಗಿ ಅವರ ಹೆಸರಿನಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ, ರಕ್ತದಾನ ಶಿಬಿರ, ಕ್ರೀಡಾಕೂಟ ಹಾಗೂ ವಿವಿಧ ವಿಶೇಷ ಸಮಾಜಮುಖಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು ಎಂದರು.

ಮಾಜಿ ಕಂದಾಯ ಸಚಿವ ದಿ.ಹೆಚ್.ಸಿ.ಶ್ರೀಕಂಠಯ್ಯ ಅವರ ಸಾಧನೆ ಕುರಿತ ವಿಚಾರಗಳನ್ನು ಒಳಗೊಂಡ 2026 ನೇ ಸಾಲಿನ ನೂತನ ಕ್ಯಾಲೆಂಡರ್ ಬಿಡುಗಡೆ ಮಾಡಲಾಯಿತು. ಪಿಎಲ್ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಬಾಬು, ತಾಲ್ಲೂಕು ಯೂಥ್ ಕಾಂಗ್ರೆಸ್ ಘಟಕದ ಉಪಾಧ್ಯಕ್ಷ ಆಕರ್ಷಗೌಡ, ಜಿಲ್ಲಾ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ರುದ್ರೇಶ್, ಗ್ರಾಮ ಪಂಚಾಯಿತಿ ಸದಸ್ಯರಾದ ಚಂದ್ರು, ವಾಸಣ್ಣ, ಪ್ರಮುಖರಾದ ಅಶೋಕ್ ಹಾಗೂ ಇತರರು ಇದ್ದರು.

# ಜನ ವಿರೋಧಿ ನೀತಿ ಹಿಮ್ಮೆಟ್ಟಿಸಲು ಸಿಪಿಐಎಂ ಜನಾಂದೋಲನ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಕೇಂದ್ರದ ಬಿಜೆಪಿ ಮತ್ತು ರಾಜ್ಯದ ಕಾಂಗ್ರೆಸ್ ನೇತೃತ್ವದ ಸರ್ಕಾರಗಳ ಜನವಿರೋಧಿ ನೀತಿಗಳನ್ನು ಹಿಮ್ಮೆಟ್ಟಿಸಿ ಪರ್ಯಾಯ ಜನಪರ ನೀತಿಗಳಿಗಾಗಿ ಸಿಪಿಐಎಂ ರಾಜ್ಯಾದ್ಯಂತ ಜನಾಂದೋಲನ ಸಂಘಟಿಸಲಾಗುತ್ತಿದೆ ಎಂದು ಸಿಪಿಐಎಂ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯೆ ಎಸ್.ವರಲಕ್ಷ್ಮಿ ಹೇಳಿದರು.

ನಗರದ ಸಿಪಿಐಎಂ ಕಚೇರಿಯಲ್ಲಿ ಜನಾಂದೋಲನದ ಕಿರುಪುಸ್ತಕ ಬಿಡುಗಡೆ ಮಾಡಿ ಮಾತನಾಡಿದ ಅವರು, ಸರ್ಕಾರಗಳ ಕಾರ್ಪೋರೇಟ್ ಪರ ನೀತಿಗಳಿಂದಾಗಿ ರಾಜ್ಯದ ಜನಸಾಮಾನ್ಯರ ಮೇಲೆ ಆಗುತ್ತಿರುವ ಪರಿಣಾಮಗಳು ಮತ್ತು ಅವರ ಬದುಕಿನ ಪ್ರಶ್ನೆಗಳನ್ನು ಆಧರಿಸಿ ಭಾರತ ಕಮ್ಯೂನಿಸ್ಟ್ ಪಕ್ಷ ಜನಪರ ಪರ್ಯಾಯ ನೀತಿಗಳಿಗಾಗಿ ರಾಜ್ಯಾದ್ಯಂತ ಮನೆಮನೆ ಪ್ರಚಾರಾಂದೋಲನ ನಡೆಸುತ್ತಿದೆ. ಇದರ ಸಮಾರೋಪ ಡಿ.21ರಂದು



ಬೆಂಗಳೂರಿನಲ್ಲಿ ಬೃಹತ್ ಪ್ರತಿಭಟನಾ ಬಹಿರಂಗ ಸಭೆ ನಡೆಯಲಿದೆ ಎದು ತಿಳಿಸಿದರು.

ದಿನದಿಂದ ದಿನಕ್ಕೆ ರಾಜ್ಯದ ರೈತರು, ಕಾರ್ಮಿಕರು, ಕೂಲಿಕಾರರು, ಮಹಿಳೆಯರು, ಬಡವರು, ದಲಿತರು ಮತ್ತು ಅಲ್ಪಸಂಖ್ಯಾತರು ತೀವ್ರ ಸಂಕಷ್ಟಗಳನ್ನು ಅನುಭವಿಸುತ್ತಿದ್ದಾರೆ.

ರೈತರು ಬೆಳೆದ ಬೆಳೆಗಳಿಗೆ ನ್ಯಾಯ ಯುತ ಬೆಲೆಯಿಲ್ಲ, ಕಾರ್ಮಿಕರಿಗೆ ದುಡಿಮೆಗೆ ತಕ್ಕಂತ ಸಂಬಳವಿಲ್ಲ, ವಿಪರೀತ ಬೆಲೆ ಏರಿಕೆಯಿಂದಾಗಿ ಜನಸಾಮಾನ್ಯರು ಜೀವನ ಸಾಗಿಸುವುದೇ ಅತ್ಯಂತ ದುಸ್ತರವಾಗಿದೆ ಎಂದು ದೂರಿದರು.

ಜನಾಂದೋಲನ ಮತ್ತು ಪ್ರತಿಭಟನಾ ಬಹಿರಂಗ ಸಭೆಯಲ್ಲಿ ಕೃಷಿ ಬಿಕ್ಕಟ್ಟು, ಭೂಮಿ ಪ್ರಶ್ನೆ, ಕಾರ್ಮಿಕರ ಹಕ್ಕುಗಳು, ನಿರುದ್ಯೋಗ, ಭ್ರಷ್ಟಾಚಾರ, ಶಿಕ್ಷಣ, ಆರೋಗ್ಯ, ವಸತಿ-ನಿವೇಶನ, ಮಹಿಳೆಯರು, ದಲಿತರು, ಅಲ್ಪಸಂಖ್ಯಾತರು, ಕೋಮುವಾದ-ಜಾತೀವಾದ, ಸೇವೆಗಳ ಖಾಸಗೀಕರಣ, ಹೆಚ್ಚುತ್ತಿರುವ ಬಡವ-ಶ್ರೀಮಂತ ಅಸಮಾನತೆ, ಬಯಲು ಸೀಮೆಯ ನೀರಾವರಿ ಪ್ರಶ್ನೆ, ಒಕ್ಕೂಟ ವ್ಯವಸ್ಥೆ ಮೇಲೆ ದಾಳಿ, ಪ್ರಜಾಪ್ರಭುತ್ವ ವಿರೋಧಿ ಕಾನೂನುಗಳು, ಭೂಕಬಳಿಕೆ, ಮೈಕ್ರೋಫೈನಾನ್ಸ್ ಕುರಿತು ಸಮಗ್ರ ತನಿಖೆ ನಡೆಯಬೇಕು ಎಂದು ಒತ್ತಾಯಿಸಲಾಗುವುದು ಎಂದರು. ಸಿಪಿಐಎಂ ಜಿಲ್ಲಾ ಕಾರ್ಯ ದರ್ಶಿ ಹೆಚ್.ಆರ್.ನವೀನ್ ಕುಮಾರ್, ರಾಜ್ಯ ಉಪಾಧ್ಯಕ್ಷ ಧರ್ಮೇಶ್, ಎಂ.ಜಿ.ಪೃಥ್ವಿ, ಹೆಚ್.ಎಸ್.ಮಂಜುನಾಥ್, ಜಿ.ಪಿ.ಸತ್ಯನಾರಾಯಣ, ಸೌಮ್ಯ, ಅರವಿಂದ ಇದ್ದರು.

# ಸ್ನೇಹಿತನ ಉಸಿರು ನಿಲ್ಲಿಸಿದ ಗಾಂಜಾ ಅಮಲು

## ಹಾಸನದಲ್ಲಿ ಹೃದಯ ವಿದ್ರಾವಕ ಘಟನೆ । ದಾರಿ ತಪ್ಪಿದ ಯುವಕರು

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಮೀಸೆ ಚಿಗುರದ ಹುಡುಗರ ದುಶ್ಚಟ ಸ್ನೇಹಿತನ ಕೊಲೆಯಲ್ಲಿ ಅಂತ್ಯ ಕಂಡಿರುವುದು ಮಾತ್ರವಲ್ಲದೆ ಕೃತ್ಯ ಎಸಗಿದ ವಿಡಿಯೋ ಅನ್ನು ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟು ನಾಗರಿಕ ಸಮಾಜವೇ ತಲೆ ತಗ್ಗಿಸುವಂತೆ ಮಾಡಿದೆ.

ಹೂವಿನಹಳ್ಳಿ ಗ್ರಾಮದ ಕೀರ್ತಿ (24) ಹತ್ಯೆಗೀಡಾದ ಯುವಕ. ದೊಡ್ಡಕಣಗಾಲ್ ಗ್ರಾಮದ ಉಲ್ಲಾಸ್, ಕೆ.ಹೊಸಕೊಪ್ಪಲು ನಿವಾಸಿ ಚಂದನ್ ಹಾಗೂ ಮತ್ತೊಬ್ಬ ಸೇರಿ ಕೃತ್ಯ ಎಸಗಿದ್ದಾನೆ ಎನ್ನಲಾಗಿದೆ. ಆರೋಪಿಗಳು ಬೆಂಗಳೂರಿನಲ್ಲಿ ತಲೆ ಮರೆಸಿಕೊಂಡಿದ್ದು ಮೊಬೈಲ್ ಲೋಕೇಶನ್ ಆಧರಿಸಿ ಪೊಲೀಸರು ಶೋಧ ಕಾರ್ಯ ನಡೆಸಿದ್ದಾರೆ.

ಸೋಮವಾರ ಸಂಜೆ ನಗರ ಹೊರವಲಯದ ಚನ್ನಪಟ್ಟಣ




ಗ್ರಾಮ ವ್ಯಾಪ್ತಿಯ ಪವನಪುತ್ರ ಕೋಳಿ ಫಾರಂ ಹಿಂಭಾಗದ ಖಾಲಿ ಜಾಗದಲ್ಲಿ ಕೊಲೆಗೈದಿದ್ದಾರೆ. ಆಪ್ತ ಸ್ನೇಹಿತರಾಗಿದ್ದ ಮೂವರು ಆಟೋ ಓಡಿಸಿಕೊಂಡು ಜೀವನ ನಡೆಸುತ್ತಿದ್ದರು. ಇವರ ನಡುವೆ ಯಾವ ವೈರತ್ವವೂ ಇರಲಿಲ್ಲ. ಮೀಸೆ ಚಿಗುರದ ಹುಡುಗರು ಗಾಂಜಾ ವ್ಯಸನಕ್ಕೆ ಬಿದ್ದು ಸ್ನೇಹಿತನ ಪ್ರಾಣವನ್ನೇ ತೆಗೆದಿದ್ದಾರೆ.

ಮಂಗಳವಾರ ಬೆಳಿಗ್ಗೆ ಮೃತ ಕೀರ್ತಿ ಅವರ ಸಹೋದರ ಕಿರಣ್ ಗೆ ಸ್ನೇಹಿತರೊಬ್ಬರು ಕೃತ್ಯದ ವಿಡಿಯೋ ಕಳುಹಿಸಿದ್ದು ಅದರಲ್ಲಿ ಉಲ್ಲಾಸ್ ಎಂಬಾತ ಶವದ ಪಕ್ಕ ನಿಂತು ವಿಡಿಯೋ ಮಾಡಿರುವುದು ಕಂಡಿದೆ. ವಿಡಿಯೋ ಜಾಗ ಹುಡುಕಿಕೊಂಡು ಪೊಲೀಸರೊಂದಿಗೆ ಬಂದ ಕಿರಣ್‌ಗೆ ಶವ ಗುರುತು ಸಿಕ್ಕಿದೆ. ಮುಖದ ಮೇಲೆ ಜಜ್ಜಿದ ಗಾಯ ರಕ್ತ ಸೋರಿರುವುದನ್ನು ಕಂಡು ಕುಟುಂಬಸ್ಥರು ಬೆಚ್ಚಿ ಬಿದ್ದಿದ್ದಾರೆ.

ಸೋಮವಾರ ಸಂಜೆ 6ರ ಸಮಯದಲ್ಲಿ ಗಾಂಜಾ ಅಮಲಿನಲ್ಲೇ ಮೂವರು ಖಾಲಿ ಜಾಗಕ್ಕೆ ತೆರಳಿದ್ದರು. ಕೀರ್ತಿಯ ಮುಖಕ್ಕೆ ಕಲ್ಲಿನಿಂದ ಜಜ್ಜಿ ಹತ್ಯೆಗೈದ ಬಳಿಕ ತನ್ನ ಮೊಬೈಲ್ ಕ್ಯಾಮರಾದಲ್ಲಿ ವಿಡಿಯೋ ಮಾಡಿರುವ ಉಲ್ಲಾಸ್, ಲೋ ನಿಂತ್ಕೊಳ್ರೋ, ದೊಡ್ಡದಾಗೆ ಬೆಳೆದಿದ್ದೀವಿ ಏನಾಗುತ್ತೆ. ನಾವು ಮರ್ಡರ್ ಹೊಡೆದಿದ್ದಿವಿ, ಇವನ್ನ ಸಾಯಿಸಿದ್ದಿವಿ ನೋಡಿ ಎಂದು ಅವಾಚ್ಯವಾಗಿ ಹೇಳುತ್ತಾನೆ. ಕೀರ್ತಿ ಮೃತಪಟ್ಟ ಬಳಿಕ ಮೂವರು ಅಲ್ಲಿಂದ ಎಸ್ಕೇಪ್ ಆಗಿದ್ದಾರೆ. ಮಂಗಳವಾರ ಬೆಳಿಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ವಿಡಿಯೋ ಹರಿದಾಡಿದ್ದು ಪೊಲೀಸರು ಶೋಧ ಕಾರ್ಯ ಕೈಗೊಂಡಿದ್ದಾರೆ.

ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಎಲೈಟ್ ಶಾಲೆಯ ನಾಗರಾಜುಗೆ ಗುರು ರತ್ನ ಪ್ರಶಸ್ತಿ




ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ನಗರದ ಹೇಮಾವತಿ ನಗರದಲ್ಲಿರುವ ಎಲೈಟ್ ಶಾಲೆ ಆಡಳಿತಾಧಿಕಾರಿ ಕೆ.ಎಂ.ನಾಗರಾಜು ಅವರು ಚೆನ್ನೈ ಮೂಲದ AMET (Academy of Maritime Education and Training) ವಿಶ್ವವಿದ್ಯಾಲಯ ಕೊಡಮಾಡುವ ಕರ್ನಾಟಕ ಗುರು ರತ್ನ ಪ್ರಶಸ್ತಿ-2025ಕ್ಕೆ ಭಾಜನರಾಗಿದ್ದಾರೆ.

ಕೆ.ಎಂ.ನಾಗರಾಜು ಅವರ 25 ವರ್ಷಗಳ ನಿರಂತರ ಶೈಕ್ಷಣಿಕ ಸಾಧನೆ ಹಾಗೂ ಶಿಕ್ಷಣ ಕ್ಷೇತ್ರದಲ್ಲಿ ನಾವೀನ್ಯತೆ, ಶೈಕ್ಷಣಿಕ ತಂತ್ರಜ್ಞಾನದ ಮೂಲಕ ವಿದ್ಯಾರ್ಥಿಗಳಿಗೆ ಸುಲಭ ಮತ್ತು ಪರಿಣಾಮಕಾರಿಯಾಗಿ ಬೋಧಿಸುವ ಕಲೆಯನ್ನು ಗುರುತಿಸಿ ಪ್ರಶಸ್ತಿಗೆ ಪರಿಗಣಿಸಲಾಗಿದೆ. ಶಾಲೆಯ ಮುಖ್ಯಸ್ಥ ಹೆಚ್.ಪಿ.ಕಿರಣ್, ಆಡಳಿತ ಮಂಡಳಿ, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ನಾಗರಾಜು ಅವರನ್ನು ಅಭಿನಂದಿಸಿದ್ದಾರೆ.

# ಇತಿಹಾಸದಲ್ಲಿ ಈ ದಿನ

## ಡಿಸೆಂಬರ್-10

**1948:** ಅಂತಾರಾಷ್ಟ್ರೀಯ ಮಾನವ ಹಕ್ಕುಗಳ ದಿನವಾಗಿ ಆಚರಿಸಲಾಗುತ್ತದೆ.

**1868:** ಮೊದಲ ಬಾರಿಗೆ ಟ್ರಾಫಿಕ್ ಸಿಗ್ನಲ್ ಅಮೇರಿಕಾದಲ್ಲಿ ಬಳಸಲಾಯಿತು.

**1901:** ಮೊದಲ ನೊಬೆಲ್ ಪ್ರಶಸ್ತಿ ಪ್ರದಾನ ಮಾಡಿದ ದಿನ.

**1968:** ಜಪಾನ್‌ನ ಮೊದಲ ವೇಗದ ಬುಲೆಟ್ ರೈಲು ಶಿಂಕನ್ ಸೆನ್ ಹೊಸ ದಾಖಲೆ ಸೃಷ್ಟಿಸಿತು.

**1994:** ಮೊದಲ ಬ್ರೌಸರ್ ಆಧಾರಿತ ಆನ್‌ಲೈನ್ ಖರೀದಿಯಶಸ್ವಿಯಾಗಿ ನಡೆಯಿತು.

**ಜನನ**

**1815:** ಕಂಪ್ಯೂಟರ್ ವಿಜ್ಞಾನ ಪುರೋಹಿತೆ ಆಡಾ ಲವ್ಲೇಸ್

**ಮರಣ**

**1896:** ನೊಬೆಲ್ ಪ್ರಶಸ್ತಿ ಸ್ಥಾಪಕ ಆಲ್ಫ್ರೆಡ್ ನೊಬೆಲ್

# ಕುಡುಕ ಶಿಕ್ಷಕನ ಹೆಂಡತಿಯೇ ಈ ಶಾಲೆಗೆ ರೆಬೆಲ್ ಶಿಕ್ಷಕಿ


ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಚನ್ನರಾಯಪಟ್ಟಣ: ತಾಲ್ಲೂಕಿನ ಸೋರೆಕಾಯಿಪುರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕ ಹರೀಶ್ ದಿನನಿತ್ಯ ಮದ್ಯ ಸೇವನೆ ಮಾಡಿಕೊಂಡು ಶಾಲೆಗೆ ಆಗಮಿಸಿದರೆ, ಆತನ ಪತ್ನಿ ಪೂರ್ಣಿಮಾ ಎಂಬಾಕೆ ತರಗತಿಯಲ್ಲಿ ಮಕ್ಕಳಿಗೆ ಥಳಿಸುತ್ತಿದ್ದಾರೆ ಎಂಬ ಆರೋಪ ಕೇಳಿ ಬಂದಿದೆ.

ಅದರಿಂದ ರೋಸಿ ಹೋದ ಮಕ್ಕಳ ಪೋಷಕರು ಹಾಗೂ ಗ್ರಾಮಸ್ಥರು ಶಾಲೆ ಮುಂದೆ ಆಕ್ರೋಶ ವ್ಯಕ್ತಪಡಿಸಿದರು.

ಕಳೆದ ಎರಡು ವರ್ಷಗಳಿಂದ ಶಿಕ್ಷಕ ಶಿಕ್ಷಕ ಹರೀಶ್ ಇದೇ ವರ್ತನೆ ಮಾಡುತ್ತಿದ್ದು, ಆತನ ಪತ್ನಿ ಪೂರ್ಣಿಮಾ ಸಹ ಶಾಲೆಗೆ ಅತಿಕ್ರಮ ಪ್ರವೇಶ ಮಾಡುವುದು ಹಾಗೂ ಮಕ್ಕಳ ಮೇಲೆ ದೌರ್ಜನ್ಯ ಮಾಡುತ್ತಿದ್ದಾಳೆ, ಇದು ಕೂಡಲೇ ನಿಲ್ಲಬೇಕು ಎಂದು ಆಗ್ರಹಿಸಿದರು.

ಮುಖ್ಯ ಶಿಕ್ಷಕಿ ಸವಿತಾ ಎಂಬುವರು ಸೋಮವಾರ ಇಲಾಖೆ ತರಗತಿಗೆ ಹೋಗಿದ್ದ ವೇಳೆ, ಪೂರ್ಣಿಮಾ ತರಗತಿಗೆ ತೆರಳಿ ವಿದ್ಯಾರ್ಥಿನಿಯರನ್ನು ಥಳಿಸಿದ್ದಾಳೆ. ಇದನ್ನು ತಿಳಿದ ಪೋಷಕರು ಹಾಗೂ ಗ್ರಾಮಸ್ಥರು



ಶಾಲೆಗೆ ಆಗಮಿಸಿ ದಂಪತಿಗಳಿಬ್ಬರಿಗೂ ತರಾಟೆ ತೆಗೆದುಕೊಂಡರು.

ವಿಷಯ ತಿಳಿಯುತ್ತಿದ್ದಂತೆಯೇ ತಾಲೂಕು ಶಿಕ್ಷಣ ಇಲಾಖೆ ಅಧಿಕಾರಿಗಳು ಶಾಲೆಗೆ ಭೇಟಿ ನೀಡಿ ಪರಿಶೀಲಿಸಿದರು. ಕ್ಷೇತ್ರ ಶಿಕ್ಷಣಾಧಿಕಾರಿ ದೀಪ, ಬಿಆರ್‌ಸಿ ಅನಿಲ್, ಶಿಕ್ಷಣ ಸಂಯೋಜಕ ಶ್ರೀನಿವಾಸ್ ಹಾಗೂ ಸಿಆರ್‌ಪಿ ಪುಟ್ಟಸ್ವಾಮಿ ಅವರು ಪೋಷಕರು ಮತ್ತು ಗ್ರಾಮಸ್ಥರಿಂದ ಲಿಖಿತ ದೂರು ಪಡೆದರು. ನಂತರ ವಿದ್ಯಾರ್ಥಿಗಳಿಂದ ಪ್ರತ್ಯೇಕವಾಗಿ ಮಾಹಿತಿ ಪಡೆದರು.



ಶಿಕ್ಷಕನ ಪತ್ನಿ ಆಗಾಗೇ ಶಾಲೆಗೆ ಬಂದು ಪಾಠಗಳ ಬಗ್ಗೆ ಕೇಳಿ ಮಕ್ಕಳಿಗೆ ತೊಂದರೆ ನೀಡುತ್ತಿದ್ದಾರೆ ಎಂದು ವಿದ್ಯಾರ್ಥಿನಿ ಯೊಬ್ಬಳು ದೂರಿದಳು. ಸರ್ಕಾರಿ ಶಾಲೆ ಉಳಿಸಲು ಎಲ್ಲ ಪ್ರಯತ್ನ ಮಾಡುತ್ತಿದ್ದರೆ ಶಿಕ್ಷಕ ನಿತ್ಯ ಕುಡಿದು ಬಂದು ನಮ್ಮೂರ ಶಾಲೆಗೆ ಕೆಟ್ಟ ಹೆಸರು ತರುತ್ತಿದ್ದಾನೆ ಎಂದು ಎಸ್‌ಡಿಎಂಸಿ ಅಧ್ಯಕ್ಷ ಶ್ರೀನಿವಾಸ್ ಗ್ರಾಮದ ಚೇತನ್, ವೆಂಕಟೇಶ್ ಆರೋಪಿಸಿದರು.

ಇಂಥವರ ವಿರುದ್ಧ ಆದಷ್ಟು ಬೇಗ ಕಠಿಣ ಕ್ರಮ ಕೈಗೊಳ್ಳಬೇಕು, ಈ ಮೂಲಕ ಮಕ್ಕಳ ಸ್ವಚ್ಛಂದ ಕಲಿಕೆಗೆ ಅವಕಾಶ ಮಾಡಿಕೊಡಬೇಕು ಎಂದು ಮನವಿ ಮಾಡಿದರು.

# ಶೋಷಿತರು ದೇಶ ಮುನ್ನಡೆಸಬೇಕು: ರತ್ನಾಕರ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಚನ್ನರಾಯಪಟ್ಟಣ: ಶತಮಾನಗಳಿಂದ ಶೋಷಣೆ ಅನುಭವಿಸಿದ ಜನರು ದೇಶ ಆಳುವಂತಾಗಬೇಕು. ಹಾಗಾದಾಗ ಮಾತ್ರ ಡಾ. ಬಿ.ಆರ್. ಅಂಬೇಡ್ಕರ್ ಅವರ ಕನಸು ನನಸಾಗುತ್ತದೆ ಎಂದು ಮುರಾರ್ಜಿ ದೇಸಾಯಿ ವಸತಿ ಕಾಲೇಜು ಉಪನ್ಯಾಸಕ ರತ್ನಾಕರ ಪ್ರತಿಪಾದಿಸಿದರು.

ಪಟ್ಟಣದ 5ನೇ ವಾರ್ಡ್‌ನ ತಗ್ಯಮ್ಮ ಬಡಾವಣೆಯ ನಿವಾಸಿಗಳು ಹಾಗೂ ದಲಿತ ಸಂಘರ್ಷ ಸಮಿತಿಯಿಂದ ಹಮ್ಮಿಕೊಂಡಿದ್ದ ಡಾ. ಬಿ.ಆರ್.




ಅಂಬೇಡ್ಕರ್ ಅವರ 69ನೇ ಪರಿನಿಬ್ಬಾಣ ದಿನ ಕಾರ್ಯಕ್ರಮದಲ್ಲಿ ಮಾತನಾಡಿ, ಶೋಷಿತ ಸಮುದಾಯದ ವಿಮೋಚನೆಗಾಗಿ ಜೀವನವನ್ನು ಮುಡಿಪಿಟ್ಟು ಹೋರಾಟ ಮಾಡಿದ ಮಹಾಪುರುಷ. ಆದರೆ ಅವರು ತನ್ನ ಸಾವಿನ ಕೊನೆಯ ದಿನಗಳಲ್ಲಿ ಆಪ್ತ ಸಹಾಯಕ ನಾನಕ್ ಚಂದ್ ರತ್ತು ಅವರೊಂದಿಗೆ ಮಾತನಾಡುತ್ತಾ ಈ ದೇಶದ ಅಸ್ಪೃಶ್ಯರ ಮೇಲೆ ದಬ್ಬಾಳಿಕೆ ದೌರ್ಜನ್ಯ ಕೊನೆಯಾಗಲು ಅವರು ಈ ದೇಶದ ಆಳುವ ವರ್ಗವಾದ ಮಾತ್ರ ಸಾಧ್ಯ. ಹಾಗಾಗಿ ಇಂದೇ ಹೋಗಿ ಹೇಳು ನಿಮ್ಮಗಳ ಮನೆಯ ಗೋಡೆಯ ಮೇಲೆ ಬರೆದುಕೊಳ್ಳಿ ಈ ಮಾತನ್ನು ಅವರಿಗೆ ಹೋಗಿ ಹೇಳು ಎಂದು ಹೇಳಿದ್ದರು. ಆದರೆ ಅವರು ಪರಿನಿಬ್ಬಾಣ ಹೊಂದಿ 69 ವರ್ಷ ಕಳೆದರೂ ಇಂದಿಗೂ ಕೂಡ ಶೋಷಿತ ವರ್ಗದವರು ದೇಶವನ್ನು ಆಳುವ ವರ್ಗವಾಗದಿರುವುದು ವಿಷಾದನೀಯ ಎಂದರು.

# ಸುತ್ತೂರು ಜಾತ್ರೆ ಶರಣ ಸಂಸ್ಕೃತಿ ಪರಿಚಯಿಸುವ ವೇದಿಕೆ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಸಕಲೇಶಪುರ: ಸುತ್ತೂರು ಜಾತ್ರಾ ಮಹೋತ್ಸವ ಕೇವಲ ಭಕ್ತಿ ಮಾತ್ರವಲ್ಲ ಜ್ಞಾನ ಮತ್ತು ಶರಣ ಸಂಸ್ಕೃತಿಯ ಮಹಾ ಭಂಡಾರ ಎಂದು ಮಲೆನಾಡು ವೀರಶೈವ ಸಮಾಜದ ಕಾರ್ಯದರ್ಶಿ ಯಡೆಹಳ್ಳಿ ಆರ್.ಮಂಜುನಾಥ್ ಹೇಳಿದರು.

ಪಟ್ಟಣಕ್ಕೆ ಆಗಮಿಸಿದ ಸುತ್ತೂರು ಜಾತ್ರಾ ಮಹೋತ್ಸವದ ಪ್ರಚಾರ ರಥಕ್ಕೆ ಸ್ವಾಗತಿಸಿ ಮಾತನಾಡಿ, ಸಹಸ್ರ ಸಂವತ್ಸರಗಳ ಹಿಂದೆ ಕಪಿಲಾ ನದಿ ತೀರದಲ್ಲಿ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳ ತಪಸ್ಸಿನಿಂದ ಸಂಸ್ಥಾಪಿತವಾದ ಸುತ್ತೂರು ಶ್ರೀಕ್ಷೇತ್ರದಲ್ಲಿ 2026ರ ಜ. 15 ರಿಂದ 20ರ ವರೆಗೆ ಜಾತ್ರಾ ಮಹೋತ್ಸವ ಜರುಗಲಿದೆ. ಸಾಮೂಹಿಕ ವಿವಾಹ, ಭಜನಾ ಮೇಳ, ವಸ್ತು ಪ್ರದರ್ಶನ, ಕೃಷಿ ಮೇಳ, ದನಗಳ ಜಾತ್ರೆ, ಸಾಂಸ್ಕೃತಿಕ ಮೇಳ, ದೋಣಿ ವಿಹಾರ, ಚಿತ್ರಕಲೆ, ರಂಗೋಲಿ, ಗಾಳಿಪಟ, ಸೋಬಾನೆ ಪದ, ರಾಗಿಬೀಸುವ ಸ್ಪರ್ಧೆ ಸೇರಿ ಅನೇಕ ಕಾರ್ಯಕ್ರಮಗಳು ಆಯೋಜಿಸಲಾಗಿವೆ. ನಾಟಕಗಳು ಹಾಗೂ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಗಳೂ ನಡೆಯಲಿವೆ ಎಂದರು. ಭಾರತದ ವಿವಿಧ ಭಾಗಗಳಿಂದ ಆಗಮಿಸುವ ಲಕ್ಷಾಂತರ ಭಕ್ತರಿಗೆ ಪ್ರಸಾದ ವಿತರಣೆ ಹಾಗೂ ತಾತ್ಕಾಲಿಕ ವಸತಿ ವ್ಯವಸ್ಥೆ ಕಲ್ಪಿಸಲಾಗಿದೆ. ಕಾರ್ಯಕ್ರಮಗಳಿಗೆ ಮಠಾಧೀಶರು, ರಾಜ್ಯಪಾಲರು, ಮುಖ್ಯಮಂತ್ರಿ, ಕೇಂದ್ರ-ರಾಜ್ಯದ ಸಚಿವರು, ಸಂಸದರು, ಶಾಸಕರು, ಕಲಾವಿದರು ಹಾಗೂ ಗಣ್ಯರನ್ನು ಆಹ್ವಾನಿಸಲಾಗಿದೆ ಎಂದರು.

ಸಾಮೂಹಿಕ ವಿವಾಹ, ಕುಸ್ತಿ ಪಂದ್ಯಾವಳಿ, ರಂಗೋಲಿ, ಗಾಳಿಪಟ ಮತ್ತು ಚಿತ್ರಕಲೆ ಸ್ಪರ್ಧೆಗಳ ವಿವರಗಳಿಗೆ ಸುತ್ತೂರು ಶ್ರೀಕ್ಷೇತ್ರ ಅಥವಾ ಮೈಸೂರು ಜೆಎಸ್‌ಎಸ್ ಮಹಾವಿದ್ಯಾಪೀಠದ ಜಾತ್ರಾ ಕಚೇರಿಯಲ್ಲಿ ಸಂಪರ್ಕಿಸಬಹುದು. ಪೂಜಾ ಕೈಂಕರ್ಯಗಳಿಗೆ ಆಸಕ್ತಿ ಇರುವ ಭಕ್ತರಿಗೂ ಇದೇ ಕಚೇರಿಯಲ್ಲಿ ಮಾಹಿತಿ ಲಭ್ಯ ಎಂದು ತಿಳಿಸಿದರು.

ಅಕ್ಕಮಹಾದೇವಿ ಮಹಿಳಾ ಸಂಘದ ತಾಲ್ಲೂಕು ಅಧ್ಯಕ್ಷೆ ಕೋಮಲ ದಿನೇಶ್ ಮಾತನಾಡಿ, ಸುತ್ತೂರು ಶಿವರಾತ್ರೀಶ್ವರ ಶಿವಯೋಗಿಗಳ ಸಮಾಜಸೇವಾ ಕಾರ್ಯಗಳು ಯುವಕರಿಗೆ ಮಾದರಿಯಾಗಿವೆ ಎಂದು ಹೇಳಿದರು.

ಸಮುದಾಯದ ಮುಖಂಡರಾದ ಕೌಡಹಳ್ಳಿ ಲೋಹಿತ್, ಚಂದ್ರಶೇಖರ್, ಸುರೇಶ್, ಗಾಯತ್ರಿ, ರೇಖಾ ಸುರೇಶ್, ಚಂದ್ರಶೇಖರ್, ಜೆಎಸ್‌ಎಸ್ ವಿದ್ಯಾ ಸಂಸ್ಥೆಯ ರೇಣುಕಾರಾಧ್ಯ, ಶಿವಕುಮಾರ್, ನಂಜುಂಡಸ್ವಾಮಿ, ದಿನೇಶ್ ಅನೇಕರು ಉಪಸ್ಥಿತರಿದ್ದರು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248